

# ರೈಮಾ 'ಪ್ರಾದೇಶಿಕತೆ'!

ಬಾಲಿವುಡ್‌ನಲ್ಲಿ 12 ವರ್ಷದ ಹಾದಿ ಸವೆಸಿರುವ ರೈಮಾ ಸೇನ್, ಬೆನ್ನ ಹಿಂದೆ ನೋಡಿದರೆ ಸಿನಿಮಾಗಳ ಸಾಲು ಹೆಚ್ಚೇನೂ ಕಾಣಿಸುವುದಿಲ್ಲ. ಸಿನಿಮಾಗಳ ಆಯ್ಕೆ ವಿಚಾರದಲ್ಲಿ ಆಕೆಯದು ಅಳೆದು ತೂಗುವ ನೀತಿ. ಬಾಲಿವುಡ್‌ನಲ್ಲಿ ಗುರುತಿಸಿಕೊಂಡ ಬಳಿಕ ಪ್ರಾದೇಶಿಕ ಭಾಷಾ ಸಿನಿಮಾಗಳಲ್ಲಿ ನಟಿಸಲು ಇಷ್ಟಪಡುವ ನಟಿಯರ ಸಂಖ್ಯೆ ತೀರಾ ವಿರಳ. ತಮ್ಮ ವರ್ಚಸ್ಸು ಕಡಿಮೆಯಾಗುತ್ತದೆ ಎಂಬ ಭಯ ಅವರಲ್ಲಿರುತ್ತದೆ. ಆದರೆ, 37ರ ಹರೆಯದ ರೈಮಾಗೆ ಈ ಭಯವಿಲ್ಲ. ಆಕೆಗೆ ತನ್ನ ಮಾತೃಭಾಷೆಯಾದ ಬೆಂಗಾಳಿಯ ಸಿನಿಮಾಗಳಲ್ಲಿ ನಟಿಸುವುದೇ ಹೆಚ್ಚು ಇಷ್ಟವಂತೆ. 'ಪರಿಣೀತಾ' ಮತ್ತು 'ಹನಿಮೂನ್ ಟ್ರಾವೆಲ್ಸ್ ಪ್ರೈ.ಲಿ' ಚಿತ್ರಗಳಲ್ಲಿ ನಟಿಸಿದ ಬಳಿಕ ಕೋಲ್ಕತ್ತಗೆ ಮರಳಿ ಅನೇಕ ಬೆಂಗಾಳಿ ಸಿನಿಮಾಗಳಲ್ಲಿ ಬಣ್ಣಹಚ್ಚಿದಳು. ಈಗ '2006 ವಾರಾಣಸಿ' ಚಿತ್ರದ ಬಿಡುಗಡೆಗೆ ಕಾದಿರುವ ರೈಮಾ ಮತ್ತೆ ಊರಿಗೆ ಮರಳುವ ತವಕದಲ್ಲಿದ್ದಾಳೆ. ಹಿಂದಿ ಸಿನಿಮಾಗಳಲ್ಲಿ ತನಗೆ ಬಂದ ಅವಕಾಶಗಳಲ್ಲಿ ಅತಿ ಉತ್ತಮ ಎನಿಸಿದ್ದನ್ನು ಮಾತ್ರ ಆಯ್ದುಕೊಳ್ಳುವುದಾಗಿ ಹೇಳುವ ರೈಮಾ, ತಾನು ಮುಖ್ಯವಾಹಿನಿಯ ಕಮರ್ಷಿಯಲ್ ಸಿನಿಮಾ ವಿರೋಧಿಯಲ್ಲ. ಆಸಕ್ತಿಕರ ಎನಿಸಿದರೆ ಅಂತಹ ವ್ಯಾಪಾರಿ ಸಿನಿಮಾದಲ್ಲಿಯೂ ನಟಿಸಲು ಸಿದ್ಧ ಎಂದು ಹೇಳಿಕೊಳ್ಳುತ್ತಾಳೆ. ಇತ್ತೀಚಿನ ದಿನಗಳಲ್ಲಿ ವಿಶಿಷ್ಟ ವಸ್ತುಗಳ ಅದ್ಭುತ ಸಿನಿಮಾಗಳು ಸೃಷ್ಟಿಯಾಗುತ್ತಿವೆ. ಅವುಗಳಲ್ಲಿ ತನಗೆ ಅವಕಾಶ ಸಿಗುತ್ತದೆ ಎಂಬ ಭರವಸೆ ಇದೆ. '2006 ವಾರಾಣಸಿ'ಯಲ್ಲಿ ಓಂ ಪುರಿ ಸಹ ನಟಿಸಿದ್ದರು. ಆದರೆ ಅವರೊಂದಿಗೆ ತೆರೆಹಂಚಿಕೊಳ್ಳುವ ಅವಕಾಶ ತನಗೆ ದೊರಕಲಿಲ್ಲ ಎಂಬ ಬೇಸರ ಆಕೆಯದು.



# ನಿರುದ್ಯೋಗಿ ಎಂದಲ್ಲ!

ಒಂದು ಕಾಲದಲ್ಲಿ ಸುದ್ದಿಯಲ್ಲಿದ್ದು, ಇದ್ದಕ್ಕಿದ್ದಂತೆ ತೆರೆ ಮರೆಗೆ ಸರಿದ ಹೆಸರುಗಳಲ್ಲಿ ನೇಹಾ ಧೂಪಿಯಾ ಕೂಡ ಒಬ್ಬಳು. ಮಲಯಾಳಂ, ತೆಲುಗು ಸಿನಿಮಾಗಳಲ್ಲಿ ಒಂದಷ್ಟು ಹೆಸರು ಮಾಡಿ ಬಾಲಿವುಡ್ ಮೆಟ್ಟಿಲು ಹತ್ತಿದ ನೇಹಾ, 'ಗರಂ ಮಸಾಲಾ', 'ಶೂಟೌಟ್ ಅಟ್ ಲೋಖಂಡ್ವಾಲಾ', 'ಕ್ಯಾ ಕೂಲ್ ಹೇ ಹಮ್" ಮುಂತಾದ ಯಶಸ್ವಿ ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದಳು. ಈಗ ನೇಹಾಳ ಹೆಸರು ಅಷ್ಟಾಗಿ ಚಾಲ್ತಿಯಲ್ಲಿಲ್ಲ. ಪ್ರಮುಖ ಬ್ಯಾನರ್ ಸಿನಿಮಾಗಳಲ್ಲಿ ಆಕೆ ನಟಿಸುತ್ತಿಲ್ಲ. ಹೀಗಾಗಿ ಆಕೆಗೆ ಬೇಡಿಕೆ ಇಲ್ಲ. ಕೆಲಸವಿಲ್ಲದೆ ಖಾಲಿ ಕುಳಿತಿದ್ದಾಳೆ ಎಂಬ ಮಾತುಗಳು ಕೇಳಬರುತ್ತಿವೆ. ಅದಕ್ಕೆ ನೇಹಾ ಕೋಪ ವ್ಯಕ್ತಪಡಿಸಿದ್ದಾಳೆ. 'ದೊಡ್ಡ ದೊಡ್ಡ ಸಿನಿಮಾಗಳಲ್ಲಿ ನಟಿಸುತ್ತಿಲ್ಲ ಎಂಬ ಮಾತ್ರಕ್ಕೆ ಕಲಾವಿದ ನಿರುದ್ಯೋಗಿಯಾಗಿದ್ದಾನೆ ಎಂದರ್ಥವಲ್ಲ. ನಾನು ಬಿಜಿಯಾಗಿಯೇ ಇದ್ದೇನೆ. ಎಷ್ಟೋ ದೊಡ್ಡ ಸ್ಟಾರ್‌ಗಳು ನಿರಂತರವಾಗಿ ತೆರೆಯ ಮೇಲೆ ಕಾಣಿಸಿಕೊಳ್ಳುವುದಿಲ್ಲ. ಅವರು ಫುಟ್‌ಬಾಲ್ ತಂಡದ ಮಾಲೀಕತ್ವ ಹೊಂದಿರುತ್ತಾರೆ, ಬೇರೆ ಬೇರೆ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಏಳೆಂಟು ವರ್ಷಗಳಿಂದ ನಟಿಸದ ನಟಿಯರೂ ಕಿರುತೆರೆ, ಜಾಹೀರಾತುಗಳು ಮತ್ತಿತರ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಅವರು ಸುಮ್ಮನೆ ಕುಳಿತಿರುವುದಿಲ್ಲ' ಎಂದು ತನ್ನನ್ನು ನಿರುದ್ಯೋಗಿ ಎಂದವರ ಮೇಲೆ ಕಿಡಿಕಾರಿದ್ದಾಳೆ.

ಇತ್ತೀಚೆಗೆ 'ಪಾಸ್ ಗಯಾ ರೆ ಒಬಾಮ' ಮತ್ತು 'ಮೋಹ್ ಮಾಯಾ ಮನಿ' ಚಿತ್ರಗಳಲ್ಲಿ ನಟಿಸಿದ್ದ ನೇಹಾ, 'ನಿಮ್ಮ ಹಾದಿಯಲ್ಲಿ ಒಳ್ಳೆಯ ಕೆಲಸವೇ ಸಿಗುತ್ತದೆ ಮತ್ತು ಅಂತಹ ಆಸಕ್ತಿ ಮೂಡಿಸುವ ಸಿನಿಮಾಗಳ ನಿರ್ದೇಶಕರ ಜತೆ ಕೆಲಸ ಮಾಡುತ್ತೇವೆ ಎಂಬ ಭರವಸೆ ಹೊಂದಿರಬೇಕು. ನಾನು ಇನ್ನೂ ಚಾಲ್ತಿಯಲ್ಲಿದ್ದೇನೆ ಎಂದು ನಿರ್ದೇಶಕರಿಗೆ ಗೊತ್ತು. ನನಗೆ ಆಸಕ್ತಿಕರ ಅವಕಾಶಗಳು ಬರುತ್ತಿವೆ, ಆದರೆ ಅವು ನನಗೆ ಸಾಕಷ್ಟು ಆಸಕ್ತಿಕರ ಎನಿಸುತ್ತಿಲ್ಲ' ಎಂದಿದ್ದಾಳೆ.

■ ಅಮಿ

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65